


# ಕಂಗನಾ ನಿಟ್ಟುಸಿರು

ಸದ್ಯ ವರ್ಷ ಮುಗಿಯಿತಲ್ಲ!– ಹೀಗೆಂದು ನಿಟ್ಟುಸಿರು ಬಿಡುತ್ತಿರುವಾಕೆ ಕಂಗನಾ ರನೋಟ್. ಹೊಸ ವರ್ಷಕ್ಕೆ ಕಾಲಿಟ್ಟಾಗ ನಟ ನಟಿಯರು ಒಮ್ಮೆ ಹಿಂದಿನ ವರ್ಷದತ್ತ ಹೊರಳಿ ಸೋಲು– ಗೆಲುವುಗಳ ಲೆಕ್ಕಾಚಾರ ಹಾಕುವುದು ಸಾಮಾನ್ಯ. ಹಾಗೆಯೇ ಕಂಗನಾ ಹಿಂದಿರುಗಿದಾಗ ಖುಷಿ ಮತ್ತು ಕಹಿ ಎರಡೂ ಢಾಳಾಗಿ ಕಂಡಿದೆ.

ಸಿನಿಮಾ ವಿಚಾರದಲ್ಲಿ 2016 ಕಂಗನಾ ಪಾಲಿಗೆ ಸಂತಸದ ವರ್ಷವೇ. 'ತನು ವೆಡ್ಸ್ ಮನು 2' ಚಿತ್ರದ ಅಭಿನಯಕ್ಕಾಗಿ ಆಕೆ ಮೂರನೇ ಬಾರಿ ರಾಷ್ಟ್ರಪ್ರಶಸ್ತಿಯನ್ನು ಮುಡಿಗೇರಿಸಿಕೊಂಡ ವರ್ಷವದು. ಈ ಕಿರೀಟದ ಹೊರತಾಗಿ ಆಕೆಯ ಪಾಲಿಗೆ ಇದು ಆಕೆಯನ್ನು ಪರೀಕ್ಷೆಗೊಡ್ಡಿದ ವರ್ಷವಂತೆ. ಯಾವ ಪರೀಕ್ಷೆ? ಎಂಬ ಪ್ರಶ್ನೆ ಮುಂದಿಟ್ಟರೆ ಕಂಗನಾ ನೀಡುವುದು ಅಡ್ಡಗೋಡೆಯ ಮೇಲಿನ ದೀಪದಂತಹ ಉತ್ತರ.

'ಇದು ನನ್ನ ಪಾಲಿಗೆ ಏರಿಳಿತದ ವರ್ಷ. ಅನೇಕ ಹಂತಗಳಲ್ಲಿ ಅತಿಯಾಗಿ ಸಂಭ್ರಮಿಸಿದೆ. ಇನ್ನು ಅನೇಕ ಹಂತಗಳಲ್ಲಿ ಪರೀಕ್ಷಿಸಿದೆ. ಆದರೆ,  ವರ್ಷ ಕೊನೆಗೂ ಮುಗಿಯಿತಲ್ಲ ಎಂಬುದು ನನಗೆ ದೊರೆತ ಅತಿ ಖುಷಿ' ಎಂಬ ಉತ್ತರ ಆಕೆಯದು. ಆಕೆಯನ್ನು 'ಪರೀಕ್ಷೆ'ಗೆ ಒಡ್ಡಿದ್ದು ಯಾವ ಘಟನೆ ಎಂದು ಹೇಳಿಕೊಳ್ಳದಿದ್ದರೂ, ಉತ್ತರ ರಹಸ್ಯವೇನಲ್ಲ. 'ಕೈಟ್ಸ್' ಮತ್ತು 'ಕ್ರಿಶ್ 3'ಯಲ್ಲಿ ಒಟ್ಟಿಗೆ ನಟಿಸಿದ ಬಳಿಕ ಹೃತಿಕ್ ರೋಷನ್ ಜತೆ ಕಂಗನಾಳ ರಮ್ಯ ಪ್ರೇಮ ಕಥನ ಶುರುವಾಗಿತ್ತು. ಅದನ್ನು ಹೃತಿಕ್ ನಿರಾಕರಿಸಿದ್ದರೂ, ಕಂಗನಾ ಆಗಾಗ್ಗೆ ಕಾಡುತ್ತಿದ್ದಳು. ಸಂದರ್ಶನವೊಂದರಲ್ಲಿ ಹೃತಿಕ್‌ನನ್ನು 'ಸಿಲ್ಲಿ ಎಕ್ಸ್' ಎಂದು ಕರೆದದ್ದು ಆತನನ್ನು ಕೆರಳಿಸಿತ್ತು. ಅಲ್ಲಿಂದ ಇಬ್ಬರ ನಡುವೆ ಕಾನೂನು ನೋಟಿಸ್‌ಗಳ ರವಾನೆಯದ್ದೇ ದೊಡ್ಡ ಕಥೆ. ಅದರ ಬೆನ್ನಲ್ಲೇ ನಕಲಿ ಖಾತೆಯ ಇ–ಮೇಲ್ ವಿವಾದವೂ ಹುಟ್ಟಿಕೊಂಡಿತು. ಈ ವಿವಾದದಲ್ಲಿಯೇ ಕಂಗನಾಳ 2016ರ ಪಯಣ ಮುಗಿದಿದೆ.

2017 ರನೋಟ್ ಪಾಲಿಗೆ ಮಹತ್ವದ ವರ್ಷ. 'ಇಮ್ರಾನ್', 'ರಂಗೂನ್', 'ಸಿಮ್ರಾನ್' ಹೀಗೆ ಸಾಲು ಸಾಲು ಚಿತ್ರಗಳಲ್ಲಿ ಆಕೆ ಕಾಣಿಸಿಕೊಳ್ಳುತ್ತಿದ್ದಾಳೆ. ಹೊಸ ಹುರುಪಿನೊಂದಿಗೆ ಅಡಿಯಿಡುತ್ತಿರುವುದಾಗಿ ಹೇಳಿಕೊಂಡಿದ್ದಾಳೆ.

■ ಅಮಿ

# ರಿಚ ಚಡ್ಡಾ ಧೈರ್ಯ

ಎಷ್ಟೋ ಮುಗ್ಧ ಹೆಣ್ಣುಮಕ್ಕಳು ಬಾಲ್ಯದಲ್ಲಿ ಅನುಭವಿಸುವ ಲೈಂಗಿಕ ಕಿರುಕುಳದ ನೋವನ್ನು ತಾರಾ ಕುಟುಂಬದಲ್ಲಿ ಜನಿಸಿದ ತನ್ನಂತಹವಳೂ ಅನುಭವಿಸಿದ್ದಾಗಿ ಇತ್ತೀಚೆಗೆ ಸೋನಂ ಕಪೂರ್ ಹೇಳಿಕೊಂಡಿದ್ದಳು. ಈ ಬಗ್ಗೆ ಮುಕ್ತವಾಗಿ ಹೇಳಿಕೊಳ್ಳಲೂ ಅಗಾಧ ಧೈರ್ಯ ಬೇಕು ಎನ್ನುವುದು ನಟಿ ರಿಚಾ ಚಡ್ಡಾ ಅಭಿಪ್ರಾಯ.

ಆಕೆಯ ಪ್ರಕಾರ ಆ್ಯಸಿಡ್ ದಾಳಿ, ಪ್ರತೀಕಾರದ ಹತ್ಯೆ, ಅತ್ಯಾಚಾರದಂತಹ ಘಟನೆಗಳಿಗೆ ಬಾಲಿವುಡ್ ಸಿನಿಮಾಗಳು ಪ್ರಚೋದನೆ ನೀಡುತ್ತವೆ. ಕಿರುಕುಳವನ್ನೇ ರೊಮ್ಯಾನ್ಸ್ ಎಂಬಂತೆ ಬಿಂಬಿಸುವ ಬಾಲಿವುಡ್‌ನ ಕೆಟ್ಟ ಚಾಳಿ ಅಸಹನೀಯ. ಬ್ಲಾಕ್‌ಬಸ್ಟರ್ ಚಿತ್ರಗಳಲ್ಲಿ ಅಂತಹ ದೃಶ್ಯಾವಳಿಗಳು ವಿಜೃಂಭಿಸುತ್ತವೆ. ದೊಡ್ಡ ಹೆಸರಿನ ನಟರು, ಅಸಹಾಯಕ ನಾಯಕಿಯರನ್ನು ಹಿಂಬಾಲಿಸುವ, ಶೋಷಿಸುವ ದೃಶ್ಯಗಳನ್ನು ಹಾಸ್ಯ ಎಂದು ಕರೆಯುತ್ತಾರೆ ಎಂದು ಚಿತ್ರರಂಗದ ಮೇಲೆ ಹರಿಹಾಯ್ದಿದ್ದಾಳೆ ರಿಚಾ. ಹಾಗೆಂದು, ಎಲ್ಲ ಸಮಸ್ಯೆಗಳಿಗೂ ಉದ್ಯಮದ ಮೇಲೆ ಗೂಬೆ ಕೂರಿಸುವುದು ಸರಿಯಲ್ಲ ಎನ್ನುವ ಕಳಕಳಿಯೂ ಆಕೆಯದು.

'ಸಿನಿಮಾದಿಂದಲೇ ಎಲ್ಲವೂ ಆಗುವುದು ಎಂದು ದೂಷಿಸುವುದು ಸುಲಭ. ನಾವು ಒಂದು ಸಮಾಜ. ಜೀವನವು ಕಲೆಯನ್ನು ಅನುಸರಿಸುತ್ತದೆ. ಕಲೆಯೂ ಜೀವನ ಮತ್ತು ಸಮಾಜವನ್ನು ಅದೇ ರೀತಿ ಅನುಸರಿಸುತ್ತದೆ. ಇದೊಂಥರ ಕೋಳಿ ಮೊದಲೋ ಅಥವಾ ಮೊಟ್ಟೆ ಮೊದಲೋ ಎನ್ನುವಂತಹ ಸ್ಥಿತಿ. ನೂರಾರು ವರ್ಷಗಳ ಹಿಂದೆ ಸತಿ, ವರದಕ್ಷಿಣೆಯಂತಹ ಪದ್ಧತಿಗಳನ್ನು ಒಪ್ಪಿಕೊಂಡಿದ್ದೆವು. ಆದರೆ ಈಗ ನಾವು ವಿರೋಧಿಸುತ್ತೇವೆ' ಎಂದು  ಆಕೆ ವಿಶ್ಲೇಷಿಸಿದ್ದಾಳೆ.

